# ಮಾಸ ಭವಿಷ್ಯ

ಅರುಣ ಪಿ. ಭಟ್



**ಮೇಷ:** ಹೊಸ ವರ್ಷದ ಆರಂಭ ಸಂತಸದಿಂದ ಕೂಡಿರುತ್ತದೆ. ಜೀವನದ ಹಲವು ಆಯಾಮಗಳಲ್ಲಿ ಯಶಸ್ಸು ನಿಮ್ಮದಾಗಲಿದೆ. ನೌಕರಿಯಲ್ಲಿ ಪದೋನ್ನತಿ, ವ್ಯಾಪಾರ ಉದ್ಯಮದಲ್ಲಿ ಲಾಭ. ಆದರೆ, ಸಿಟ್ಟಿನಲ್ಲಿ ದುಡುಕಿ ಮಾತಾಡಬೇಡಿ. ಆರೋಗ್ಯದ ಬಗ್ಗೆ ಎಚ್ಚರಿಕೆ ವಹಿಸಿ. ಶುಭ: 13, 22, 27 ಅಶುಭ: 4, 8, 20.



**ವೃಷಭ:** ಈ ಮಾಸ ಸಾಕಷ್ಟು ಅಚ್ಚರಿಗಳನ್ನು ನೀಡಲಿದೆ. ಇದರ ಜೊತೆಗೆ, ಜವಾಬ್ದಾರಿ, ಒತ್ತಡಗಳು ಸಹ ಹೆಗಲೇರಬಹುದು. ತಾಳ್ಮೆಯಿಂದ ನಿರ್ವಹಿಸಿದಲ್ಲಿ ಇವೆಲ್ಲಾ ಮುಂದಿನ ಯಶಸ್ಸಿಗೆ ಮೆಟ್ಟಿಲುಗಳಾಗಲಿವೆ. ಇತರರ ಭಾವನೆಗಳನ್ನು ನೋಯಿಸಬೇಡಿ. ಆರೋಗ್ಯವನ್ನು ಕಡೆಗಣಿಸಬೇಡಿ. ಶುಭ: 2, 7, 18 ಅಶುಭ: 21, 27, 29.



**ಮಿಥುನ:** ಹಣಕಾಸಿನ ಸ್ಥಿತಿ ಉತ್ತಮವಾಗಿರುತ್ತದೆ. ಹಲವು ದಿನಗಳಿಂದ ಬಾಕಿ ಇದ್ದ ಹಣ ಕೈಸೇರಲಿದೆ. ದುಂದುವೆಚ್ಚಕ್ಕೆ ಕಡಿವಾಣ ಹಾಕಿ. ಉದ್ಯೋಗ–ವ್ಯವಹಾರದ ಹೊಸ ಅವಕಾಶಗಳು ಹುಡುಕಿಕೊಂಡು ಬರಲಿವೆ. ಯೋಚಿಸಿ ಲಾಭದಾಯಕ ಅವಕಾಶಗಳನ್ನು ಆಯ್ದುಕೊಳ್ಳಿ. ಶುಭ: 9, 18, 26 ಅಶುಭ: 12, 21, 28.



**ಕರ್ಕ:** ಹಣಕಾಸಿನ ಹರಿವಿಗೆ ಇದ್ದ ಅಡೆತಡೆಗಳು ನಿವಾರಣೆಯಾಗಿ ಹಣ ಬರುವ ಮಾರ್ಗ ನಿಚ್ಚಳವಾಗುವುದು. ವಾಕ್ ಚಾತುರ್ಯದಿಂದ ಜನರನ್ನು ಗೆಲ್ಲುವಿರಿ. ಹೊಸ ವ್ಯವಹಾರಗಳಲ್ಲಿ ಹಣ ಹೂಡಿಕೆ ಮಾಡಿದರೆ ಲಾಭ ಉಂಟಾಗುತ್ತದೆ. ದುಷ್ಟ ಫಲ ನಿವಾರಣೆಗಾಗಿ ಗಣಪತಿಯನ್ನು ಆರಾಧಿಸಿರಿ. ಶುಭ 6, 8, 9 ಅಶುಭ 3, 5, 7.



**ಸಿಂಹ:** ಬಹಳ ದಿನಗಳಿಂದ ಕಂಡಿದ್ದ ಕನಸೊಂದು ನನಸಾಗುವ ಸೂಚನೆ ಇದೆ. ಮನೆ, ಆಸ್ತಿ ಖರೀದಿಗೆ ಉತ್ತಮ ಸಮಯ. ಅನೇಕ ಮೂಲಗಳಿಂದ ಹಣ ಹರಿದು ಬರಲಿದೆ. ಇತರರನ್ನು ನಂಬಿ ಹಣಕಾಸಿನ ವ್ಯವಹಾರ ಮಾಡಬೇಡಿ. ವಾಹನ ಚಲಾಯಿಸುವಾಗ ಎಚ್ಚರವಹಿಸಿ. ಶುಭ: 14, 20, 25 ಅಶುಭ: 10, 18, 22.



**ಕನ್ಯಾ:** ವೈಯಕ್ತಿಕವಾಗಿ ಹಾಗೂ ಸಾಮಾಜಿಕವಾಗಿ ನಿಮ್ಮ ವರ್ಚಸ್ಸು ಹೆಚ್ಚಲಿದೆ. ಅನಿರೀಕ್ಷಿತ ಧನಾಗಮನ. ನಿಮ್ಮ ಸಮಯವನ್ನು ಉಪಯುಕ್ತ ರೀತಿಯಲ್ಲಿ ಬಳಸಿಕೊಳ್ಳಿ. ಮಕ್ಕಳ ಶೈಕ್ಷಣಿಕ ಪ್ರಗತಿಯಿಂದ ನೆಮ್ಮದಿ. ಭೂಮಿ ಖರೀದಿ ಅಥವಾ ಆಸ್ತಿ ಬರುವ ಯೋಗವಿದೆ. ಶುಭ: 12, 18, 28 ಅಶುಭ: 11, 16, 29.



**ತುಲಾ:** ಆರಂಭದಲ್ಲಿ ಯಾವುದೂ ನಿಮ್ಮೆಣಿಕೆಯಂತೆ ನಡೆಯುತ್ತಿಲ್ಲ ಎನಿಸಿದರೂ ಕ್ರಮೇಣ ಎಲ್ಲವೂ ನಿಮ್ಮ ನಿರೀಕ್ಷೆಯಂತೆಯೇ ಸಾಗುವುದು. ನೀವು ಅಂದುಕೊಂಡಿರದ ಮೂಲದಿಂದ ಅನುಕೂಲ ಹಾಗೂ ಧನಾಗಮನ ಕಂಡುಬರಲಿದೆ. ಇತರರ ಸಮಸ್ಯೆಗಳಿಗೆ ಮಿಡಿಯುವಿರಿ. ಶುಭ: 14, 18, 22 ಅಶುಭ: 16, 23, 29.



**ವೃಶ್ಚಿಕ:** ತಿಂಗಳ ಮೊದಲ ದಿನದಿಂದಲೇ ಜೀವನದಲ್ಲಿ ಶಿಸ್ತು ಅಳವಡಿಸಿಕೊಳ್ಳಲು ಪ್ರಯತ್ನಿಸುವಿರಿ. ಆದ್ಯತೆಯ ಆಧಾರದ ಮೇಲೆ ಕೆಲಸಗಳನ್ನು ಹೊಂದಿಸಿಕೊಳ್ಳುವಿರಿ. ಸಣ್ಣಪುಟ್ಟ ತಿರುಗಾಟಗಳು, ಪ್ರವಾಸಗಳು ನಿಮ್ಮ ಚೈತನ್ಯವನ್ನು ಹೆಚ್ಚಿಸಲಿವೆ. ಹೊಸ ಅವಕಾಶಗಳು ಹುಡುಕಿಕೊಂಡು ಬರಲಿವೆ. ಶುಭ: 9, 16, 22 ಅಶುಭ: 11, 15, 23.




**ಧನು:** ಸವಾಲುಗಳನ್ನು ಎದುರಿಸಲು ಸಾಕಷ್ಟು ತಾಳ್ಮೆ ಹಾಗೂ ಏಕಾಗ್ರತೆಯ ಅವಶ್ಯಕತೆ ಇದೆ ಎನ್ನುವುದನ್ನು ಮರೆಯಬೇಡಿ. ತಿಂಗಳ ಕೊನೆಯಲ್ಲಿ ಹಣಕಾಸಿನ ಹರಿವು ನೆಮ್ಮದಿ ತರಲಿದೆ. ಸಾಹಿತ್ಯ, ಸಂಗೀತ ಶಾಸ್ತ್ರಜ್ಞರಿಗೆ ಗೌರವ ಸಿಗುತ್ತದೆ. ಉದ್ಯೋಗದಲ್ಲಿ ಮಾನಸಿಕ ಕಿರಿಕಿರಿ ಇರುವುದು. ಶುಭ: 9, 16, 22 ಅಶುಭ: 11, 15, 23.



**ಮಕರ:** ಹಣಕಾಸು ವ್ಯವಹಾರವನ್ನು ಬಹಳ ಎಚ್ಚರಿಕೆಯಿಂದ ನಡೆಸಿ. ಖರ್ಚು ಹೆಚ್ಚಾಗಬಹುದು. ನಿಮ್ಮ ಇಚ್ಛೆಯಂತೆ ನಡೆಯಲು ಅಡೆತಡೆ ಬರಬಹುದು. ಆಪ್ತ ಮಿತ್ರರು ಮನೆಗೆ ಭೇಟಿ ನೀಡುತ್ತಾರೆ. ಉದ್ಯಮಿಗಳಿಗೆ ಹೆಚ್ಚು ಅನುಕೂಲ. ವಿದ್ಯಾರ್ಥಿಗಳಿಗೆ ಆಲಸ್ಯದಿಂದ ಹಿನ್ನಡೆ. ಶುಭ: 11, 14, 25 ಅಶುಭ: 13, 26, 29.



**ಕುಂಭ:** ಕೃಷಿಕರಿಗೆ ಲಾಭ. ಆಕಸ್ಮಿಕ ಭೂಮಿ ಖರೀದಿ ಯೋಗವಿದೆ. ಹಣಕಾಸು ಸಂಸ್ಥೆಯನ್ನು ಹೊಂದಿರುವವರಿಗೆ ಉತ್ತಮ ಲಾಭ. ವೈಜ್ಞಾನಿಕ ಕ್ಷೇತ್ರದಲ್ಲಿರುವವರಿಗೆ ಭಡ್ತಿ ಯೋಗವಿದೆ. ಸಂಧಿವಾತ ಕಾಣಿಸಿಕೊಳ್ಳಬಹುದು. ವಿದ್ಯಾರ್ಥಿಗಳಿಗೆ ಶುಭ. ಶುಭ: 14, 19, 22 ಅಶುಭ: 12, 23, 26.



**ಮೀನ:** ಸಮಾಜದಲ್ಲಿ ಗೌರವಾದರಗಳು ಸಿಗಲಿವೆ. ಹಣಕಾಸಿನ ವಿಚಾರದಲ್ಲಿ ಕೆಲವರು ಆಪ್ತಮಿತ್ರರಂತೆ ನಟಿಸಿ ಮೋಸ ಮಾಡಬಹುದು, ಎಚ್ಚರಿಕೆಯಿಂದ ಇರಿ. ಶೇರು ವ್ಯವಹಾರದಲ್ಲಿ ಉತ್ತಮ ಲಾಭ. ವಾಹನ ಖರೀದಿ ಯೋಗವಿದೆ. ಕುಟುಂಬದ ಜೊತೆ ಚಿಕ್ಕ ಪ್ರವಾಸ ಮಾಡುವಿರಿ. ಶುಭ: 14, 20, 28 ಅಶುಭ: 18, 23, 29.